ಸೆಪ್ಟಂಬರ್ 1 ಮತ್ತು 2	.. ..	ಗೌರೀ ಮತ್ತು ಗಣೇಶನ ಹಬ್ಬ
ಡಿಟೋ 27	.. ..	ಮಹಾಲಯ ಅಮವಾಸ್ಯೆ
ಡಿಸೋ 28	.. ..	ದಸರಾ ಆರಂಭ
ಅಕ್ಟೋಬರ್ 6 ಮತ್ತು 7	.. ..	ಮಹಾನವಮಿ ಮತ್ತು ವಿಜಯ ದಶಮಿ
ಡಿಟೋ 26	.. ..	ದೀಪಾವಳಿ
ಡಿಟೋ 28	.. ..	ಬಲಿಪಾಡ್ಯಮಿ
ನವಂಬರ್ 9	.. ..	ಪ್ರಿನ್ಸ್ ಆಫ್ ವೇಲ್ಸ್‌ರವರ ವರುಷ ವರ್ಧಂತಿ
ಡಿಸಂಬರ್ 23ರ ಲಾಗಾಯತು 31ರ ವರಿಗೆ, ಎರಡಯದಿನಗಳೂ ಸೇರಿ		ಕ್ರಿಸ್ಟ್‌ಮಸ್ ರಜಾ ದಿನಗಳು

ಷರಾ—ಯಲ್ಲ ಆದಿತ್ಯವಾರಗಳೂ ರಜಾ, ಅನಂತಚತುರ್ದಶಿ ಹಬ್ಬವು ಭಾನುವಾರ ಬೀಳುವದ್ದರಿಂದ ನಮೂದಿಸಲ್ಪಡಲಿಲ್ಲ.

ಜಕ್ಕವರ್ತಿನಿಯವರ ವರ್ಷವರ್ಧಂತಿಯು ಮತ್ತು ಅರ್ಕಾರ್ಷಡೆ ಇವೆರಡು ಸಾಲಿಯಾನಾ ಮೋಕಳಿ ದಿನಗಳಲ್ಲಿ ಬರುವದ್ದರಿಂದ ಅವು ಸಹ ಬಿಡಲ್ಪಟ್ಟಿರುತ್ತವೆ.

"ಹುಕ್ಕುಂ ಬಮೋಜೀಬ್",
ಎಸ್. ಹೇವಾಜಿರಾವ್,
ರಜಿಸ್ಟ್ರಾರ್.

ಆಂಬಕೇ ಇಲಾಖಾ.

ತಾರೀಖು 15ನೇ ನವಂಬರ್ 1885.

ನಂ. A 17.—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ಸರ್‌ಕ್ಯೂಟ್ ಪೊಕ್ಕಾಮಿನಲ್ಲಿ ಪಾವತೀಬಗ್ಗೆ ರವಾನಿಸಲ್ಪಡುವ ದರೋಬಸ್ತು ಲೆಟರುಗಳು ವ ಪಾರಸೆಲ್‌ಗಳ ಮೇಲೆ "ಶ್ರೀಮನ್ಮಹಾರಾಜಿ ರಾಜಾಸಾಹೇಬ್ ಬಹದೂರವರ ಕ್ಯಾಂಪಿಗೆ" ಯಂಬದಾಗಿ ಮಾತ್ರ ಮೇಲ್‌ವಿಳಾಸ ಬರಿಯಬೇಕೇಹೊರ್ತು, ಫಲಾನೆ ಅಂಚೆಗೆ ಯಂಬದಾರಿ ಬರಿಯತಕ್ಕ ಅವಶ್ಯಕವಿಲ್ಲವು.

ಬಿ. ಮರಿಗಂಗಯ್ಯ,
ಆಂಬಕೇ ಬಕ್ಷಿ.

ಫಿನಾರ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರಿಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ಣಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಸ್‌ಚೇಂಜ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಸ್‌ಚೇಂಜ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಬೆಳ್ಳಿ ಖೋಟಾನಾಣ್ಯಗಳನ್ನು ಕುರಿತು.

ಸರಕ್ಯೂಲರ್ ನಂಬರ್ 1644, ಮುಕ್ಕಾಂ 12ನೇ ಡಿಸಂಬರ್ 1885ನೇ ಇಸವಿ.

ಡಿಸ್ಟ್ರಿಕ್ಟು ವ ತಾಲ್ಲೂಕು ಟ್ರೆಜರಿ ಆಫೀಸರುಗಳು ಜ್ಞಾಪಿಸಲ್ಪಡುವದೇನಂದರೆ, ಚಾಲ್ತಿ ಡಿಸಂಬರ್ 31ಕ್ಕೆ ಆಖೈರಾಗುವ 12 ತಿಂಗಳುಗಳಲ್ಲಿ ಕತ್ತರಿಸಲ್ಪಟ್ಟ ಯಾ ಮುರದು ಹಾಕಲ್ಪಟ್ಟ ಬಳ್ಳೀ ಖೋಟಾನಾಣ್ಯದ ಲೆಕ್ಕುಗಳು ಮಾಮೂಲ್ ನಮೂನೆಯಲ್ಲಿ ಸ್ರ್1886ನೇ ಇಸವಿ ಜನವರೀ ಮಾಹೆ ಅದಿಭಾಗದಲ್ಲಿ ಈ ಕಛೇರಿಗೆ ಕಳುಹಿಸಲ್ಪಡತಕ್ಕದ್ದು.

ತಾಲ್ಲೂಕುಗಳ ಲೆಕ್ಕುಗಳು ಆಯಾ ಡಿಸ್ಟ್ರಿಕ್ಟು ಲೆಕ್ಕುಗಳೊಂದಿಗೆ ಈಗಿನಂತೆಯೆ ಕೇರಿಸಲ್ಪಡತಕ್ಕದ್ದು.